# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 19-05-2023

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

J-VISHWA UAT-1 BORDER

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com
☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-1:ಸಿಂ-3: 155 :2023-24 ದಿನಾಂಕ:15-06-2023

ಮಾನ್ಯರೆ,

ವಿಷಯ: ದಿನಾಂಕ:19-05-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:19-05-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
15/6/23
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:19-05-2023 ರಂದು ಶುಕ್ರವಾರ ಪೂರ್ವಾಹ್ನ 10.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ದಲ್ಲಿ ನಡೆದ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೀತಾ ಸಿ, ಕುಲಸಚಿವರು (ಪ್ರಭಾರ) | ಸದಸ್ಯ ಕಾರ್ಯದರ್ಶಿಗಳು |
| 3. | ಶ್ರೀ ಓಂ ಪ್ರಕಾಶ್ ರಾಜೋಳಿ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 4. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 5. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 6. | ಪ್ರೊ. ಗೀತಾ ಸಿ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 7. | ಪ್ರೊ. ಚಂದ್ರಶೇಖರ್ ಕೆ., | ಸದಸ್ಯರು |
| 8. | ಶ್ರೀ ವಿನಯ್‌ಕುಮಾರ್ ಶೆಟ್ಟಿ., ಪ್ರಾಂಶುಪಾಲರು, | ಸದಸ್ಯರು |
| 9. | ಡಾ. ಎ.ಟಿ. ಪದ್ಮೇಗೌಡ., ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಎಂ. ಸ್ವಾಮಿ., ಪ್ರಾಂಶುಪಾಲರು, | ಸದಸ್ಯರು |
| 11. | ಡಾ. ಸಂಧ್ಯಾ ಕಾವೇರಿ ಕೆ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ನವೀನ್‌ಕುಮಾರ್ ಎಸ್.ಕೆ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕುವೆಂಪು ವಿಶ್ವವಿದ್ಯಾಲಯವು ಎನ್.ಇ.ಪಿ.ಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು, ಸರ್ಕಾರದ ಮಟ್ಟದಲ್ಲಿ ಪ್ರಶಂಸೆ ವ್ಯಕ್ತವಾಗಿದೆ. ಈ ಹಿಂದೆ ಹೆಚ್ಚಿನ ಯುವಜನರು ಸರ್ಕಾರಿ ಉದ್ಯೋಗಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ಈಗ ಖಾಸಗೀ ವಲಯದಲ್ಲಿ ಹೆಚ್ಚಿನ ಅವಕಾಶಗಳಿದ್ದು, ಸರ್ಕಾರಿ ನೌಕರಿಗಿಂತ ಹೆಚ್ಚಿನ ವೇತನ ಭತ್ಯೆಗಳು ಹಾಗೂ ಸೌಲಭ್ಯಗಳು ದೊರೆಯುತ್ತಿರುವುದರಿಂದ ಖಾಸಗೀ ಉದ್ಯೋಗಗಳತ್ತ ಹೆಚ್ಚಿನ ವಿದ್ಯಾರ್ಥಿಗಳು ಆಕರ್ಷಿತರಾಗುತ್ತಿದ್ದಾರೆ. ಎನ್.ಇ.ಪಿ. ಶಿಕ್ಷಣ ವ್ಯವಸ್ಥೆಯು ಅಂತರಾಷ್ಟ್ರೀಯ ಗುಣಮಟ್ಟದ್ದಾಗಿದೆ. ಎನ್.ಇ.ಪಿ.ಯಲ್ಲಿ ಜ್ಞಾನಾಧಾರಿತ ಮತ್ತು ಉದ್ಯೋಗದಾತರ ಅವಶ್ಯಕತೆಗಳಿಗೆ ಅನುಗುಣವಾಗಿ ಪಠ್ಯಕ್ರಮಗಳನ್ನು ಸಿದ್ಧಪಡಿಸಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಆಡಳಿತಾಂಗವು ಅಧ್ಯಯನ ವಿಭಾಗಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಶೈಕ್ಷಣಿಕ, ಸಂಶೋಧನೆ ಹಾಗೂ ಹಣಕಾಸಿನ ವಿಚಾರಗಳಲ್ಲಿ ಶಿಸ್ತು ತರುವುದು ಅಗತ್ಯವಾಗಿದ್ದು, ಇದಕ್ಕಾಗಿ ಹೆಚ್ಚಿನ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಸವಾಲಿನ ಕೆಲಸವಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರಮಿಸುವ ಅಗತ್ಯವಿದೆ ಎಂದರು. ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು, ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ.ಬಿ.ಎಸ್.ಬಿರಾದಾರ್-ರವರು ನೂತನವಾಗಿ ಆರಂಭವಾಗಿರುವ ಬೀದರ್ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿ ನೇಮಕಗೊಂಡಿದ್ದಾರೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಪ್ರೊ. ಎಂ. ವೆಂಕಟೇಶ್ವರಲು-ರವರು ತುಮಕೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರೊ.ಕೆ.ಎಂ.ಮಹದೇವನ್-ರವರು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ಹಾಗೂ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಟಿ. ಪರಮೇಶ್ವರ ನಾಯ್ಕ್-ರವರು ಬೀದರ್ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಹೀಗೆಯೇ ನಮ್ಮ ವಿಶ್ವವಿದ್ಯಾಲಯದಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಧ್ಯಾಪಕರು ಕುಲಪತಿಗಳಾಗಿ ನೇಮಕವಾಗಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದ ಅವರು, ವಿಶ್ವವಿದ್ಯಾಲಯವು ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರಿಗೆ ಮುಂಬಡ್ತಿಗಳನ್ನು ನೀಡುವುದರ ಮೂಲಕ ಪ್ರೋತ್ಸಾಹಿಸಲಾಗುತ್ತಿದ್ದು, 10 ವರ್ಷಗಳ ಸೇವೆ ಪೂರೈಸಿರುವ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ ಎಂದರು. ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2023-ಸಿಂ-3.01:** ದಿನಾಂಕ:17-03-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ದಿನಾಂಕ:17-03-2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಯಾವುದೇ ತಿದ್ದುಪಡಿ ಹಾಗೂ ಆಕ್ಷೇಪಣೆಗಳು ಬಂದಿಲ್ಲವಾದ್ದರಿಂದ ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಎ.ಟಿ.ಪದ್ಮೇಗೌಡರವರು ಮಾತನಾಡಿ ಹಿಂದಿನ ಸಭೆಯಲ್ಲಿ ಕೊರತೆ ಆಯವ್ಯಯವನ್ನು ಮಂಡಿಸಿದ್ದು, ಅನುಮೋದಿಸಲಾಗಿತ್ತು. ಆದರೆ, ಕೊರತೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಮುಂದಿನ ಸಭೆಯಲ್ಲಿ ಹೆಚ್ಚಿನ ಚರ್ಚೆ ನಡೆಸಲು ತೀರ್ಮಾನಿಸಲಾಗಿತ್ತು ಎಂದರು. ಡಾ. ಸಂಧ್ಯಾಕಾವೇರಿಯವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಈ ಕುರಿತಾಗಿ ಯಾವುದೇ ಕ್ರಮವಹಿಸಲು ಸಾಧ್ಯವಾಗಿಲ್ಲ. ಆದುದರಿಂದ, ಈ ಬಗ್ಗೆ ಮುಂದಿನ ಸಭೆಗೆ ಹೆಚ್ಚಿನ ಮಾಹಿತಿ ಒದಗಿಸಲು ಹಣಕಾಸು ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು. ಚರ್ಚೆಯ ನಂತರ ದಿನಾಂಕ:17-03-2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2023-ಸಿಂ-3.02:** ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023-ಸಿಂ-3.03:** ಸ್ನಾತಕ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023-ಸಿಂ-3.04:** ಸ್ನಾತಕ ಗಣಕ ವಿಜ್ಞಾನ ಮತ್ತು ಬಿ.ಸಿ.ಎ., (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕ ಸ್ನಾತಕ ಗಣಕ ವಿಜ್ಞಾನ ಮತ್ತು ಬಿ.ಸಿ.ಎ. (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2023-ಸಿಂ-3.05:** ಸ್ನಾತಕ ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರ(ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ಚರ್ಚೆ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕ ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರ (ಸಂಯುಕ್ತ) ಅಧ್ಯಯನ ಮಂಡಳಿ ರಚನೆಗಾಗಿ ಪರಿಣಿತರ ಪಟ್ಟಿಯನ್ನು ಕುಲಸಚಿವರು ಸಭೆಗೆ ಮಂಡಿಸಿದರು. ಸದಸ್ಯರಾದ ಡಾ.ಸಂಧ್ಯಾಕಾವೇರಿಯವರು ಮಾತನಾಡುತ್ತಾ, ಮನಃಶಾಸ್ತ್ರವನ್ನು ಬಿ.ಎ. ಮತ್ತು ಬಿ.ಎಸ್ಸಿ. ಎರಡೂ ಕೋರ್ಸ್‌ಗಳಲ್ಲಿ ಕಲಿಸಲಾಗುತ್ತಿದೆ. ರಾಜ್ಯದ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಮನಃಶಾಸ್ತ್ರವು ವಿಜ್ಞಾನ ನಿಕಾಯದಲ್ಲಿದೆ. ನಮ್ಮಲ್ಲಿ ಸ್ನಾತಕೋತ್ತರ ಮನಃಶಾಸ್ತ್ರ ಕೂಡ ವಿಜ್ಞಾನ ನಿಕಾಯದಲ್ಲಿದೆ. ಆದರೆ, ಸ್ನಾತಕ ಮನಃಶಾಸ್ತ್ರವು ಕಲಾ ನಿಕಾಯದಲ್ಲಿದೆ. ಮನಃಶಾಸ್ತ್ರವು ವೈಜ್ಞಾನಿಕ ಕಲಿಕೆಯಾಗಿರುವುದರಿಂದ ಇದನ್ನು ವಿಜ್ಞಾನ ನಿಕಾಯಕ್ಕೆ ಸೇರ್ಪಡೆಗೊಳಿಸಬೇಕು ಎಂದರು. ಸದಸ್ಯರಾದ ಡಾ. ಎ.ಟಿ.ಪದ್ಮೇಗೌಡ, ಡಾ.ಎಂ.ಸ್ವಾಮಿ ಹಾಗೂ ಶ್ರೀ ವಿನಯಕುಮಾರ್ ಶೆಟ್ಟಿಯವರು ಕೂಡ ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಚರ್ಚೆಯ ನಂತರ ಸ್ನಾತಕ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸಲು ಸಲ್ಲಿಸಲಾಗಿದ್ದ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು. ಮುಂದುವರೆದು, ಸ್ನಾತಕ ಮನಃಶಾಸ್ತ್ರ ಅಧ್ಯಯನ ಮಂಡಳಿಯನ್ನು ಪ್ರತ್ಯೇಕವಾಗಿ ರಚಿಸಲು ಹಾಗೂ ಸ್ನಾತಕೋತ್ತರ ಮನಃಶಾಸ್ತ್ರ ಮಂಡಳಿಯ ಅಧ್ಯಕ್ಷರನ್ನು ಸ್ನಾತಕ ಮನಃಶಾಸ್ತ್ರ ಅಧ್ಯಯನ ಮಂಡಳಿಗೂ ಅಧ್ಯಕ್ಷರಾಗಿ ನೇಮಿಸಬೇಕೆಂದು ನಿರ್ಣಯಿಸಿ, ಸ್ನಾತಕ ಮನಃಶಾಸ್ತ್ರ ಅಧ್ಯಯನ ಮಂಡಳಿ ರಚಿಸಲು ಸಲ್ಲಿಸಿದ್ದ ತಜ್ಞರ ಪಟ್ಟಿಯನ್ನು ಸಭೆಯು ಅನುಮೋದಿಸಿತು.

**2023-ಸಿಂ-3.06:** ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023-ಸಿಂ-3.07:** ಸ್ನಾತಕೋತ್ತರ ಗಣಕ ವಿಜ್ಞಾನ ಮತ್ತು ಎಂ.ಸಿ.ಎ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ಗಣಕವಿಜ್ಞಾನ ಮತ್ತು ಎಂ.ಸಿ.ಎ. (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

2023-ಸಿಂ-3.07(ಎ): ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚನೆ ಕುರಿತು.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

## ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

2023-ಸಿಂ-3.08: ಪ್ರೊ. ಬಿ.ಎಸ್.ಬಿರಾದಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ – ಇವರು ನೂತನವಾಗಿ ಸ್ಥಾಪಿತವಾಗಿರುವ ಬೀದರ್ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಬಗ್ಗೆ.

ನಿರ್ಣಯ: ಪ್ರೊ.ಬಿ.ಎಸ್.ಬಿರಾದಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರನ್ನು ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ED 91/Bidar/UNE2022 dated:20-03-2023ರಲ್ಲಿ ನೂತನವಾಗಿ ಆರಂಭಿಸಿರುವ ಬೀದರ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿ ನೇಮಕ ಮಾಡಿರುವುದರಿಂದ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಅವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

2023-ಸಿಂ-3.09: ಡಾ. ಕೆ. ಎನ್. ಮಹಾದೇವನ್, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಕಡೂರು – ಇವರು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡಿರುವುದರಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಕಡೂರಿನ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಕೆ. ಎಂ. ಮಹಾದೇವನ್‌ರವರನ್ನು ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ:ಇಡಿ 81 ಯುಎನ್‌ಇ 2022 (ಮೈಸೂರು), ದಿನಾಂಕ:28-03-2023ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿರುವುದರಿಂದ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಅವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು

2023-ಸಿಂ-3.10: ಡಾ. ಆರ್. ಹೆಚ್. ವಾಲ್ಮೀಕಿ, ಉಪಗ್ರಂಥಪಾಲಕರು – ಇವರಿಗೆ Academic Level 13A to 14ಕ್ಕೆ ವೃತ್ತಿ ಪದೋನ್ನತಿ ನೀಡುವ ಕುರಿತು.

ನಿರ್ಣಯ: ಡಾ.ರಮೇಶ್ ಹೆಚ್. ವಾಲ್ಮೀಕಿ, ಉಪಗ್ರಂಥಪಾಲಕರು ಇವರಿಗೆ ದಿನಾಂಕ:19-02-2021ರಂದು ನಡೆದ ಬಿ.ಓ.ಎ. ಸಭೆಯಲ್ಲಿ ವೃತ್ತಿಪದೋನ್ನತಿ ಯೋಜನೆಯಡಿಯಲ್ಲಿ ಗ್ರಂಥಪಾಲಕ ಹುದ್ದೆಗೆ ಸ್ಥಾನೀಕರಿಸಲು ಶಿಫಾರಸ್ಸು ಮಾಡಿರುತ್ತದೆ. ಇದನ್ನು ದಿನಾಂಕ:24-03-2021ರ ಸಿಂಡಿಕೇಟ್ ಸಭೆಯು ಅನುಮೋದಿಸಿದೆ. ಆದರೆ, ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕರ ಒಂದು ಹುದ್ದೆ ಮಾತ್ರ ಇರುವುದರಿಂದ, ಇದು ನೇರ ನೇಮಕಾತಿಯಾಗಬೇಕಾಗಿದ್ದು, ವೃತ್ತಿಪದೋನ್ನತಿ ನೀಡಲು ಅವಕಾಶವಿರುವುದಿಲ್ಲ ಎಂಬುದನ್ನು ಪರಿಗಣಿಸಿ, ಅವರಿಗೆ ಉಪಗ್ರಂಥಪಾಲಕರ ಹುದ್ದೆಯಲ್ಲಿಯೇ Academic Level 13A to 14ಕ್ಕೆ ಆರ್ಥಿಕ ಸೌಲಭ್ಯಕ್ಕಾಗಿ ವೃತ್ತಿಪದೋನ್ನತಿ ನೀಡಲು ಸಭೆಯು ಅನುಮೋದನೆ ನೀಡಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

2023–ಸಿಂ–3.11: ವೃತ್ತಿ ಪದೋನ್ನತಿ (CAS) ಸಂಬಂಧ BOA/Screening cum Evaluation Committee ನಡಾವಳಿಗಳಿಗೆ ಅನುಮೋದನೆ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಿಗೆ/ದೈಹಿಕ ಶಿಕ್ಷಣ ವಿಭಾಗದ ಸಹಾಯ ನಿರ್ದೇಶಕರಿಗೆ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ನೇಮಕಾತಿ ಮಂಡಳಿಯ ಸಭೆಗಳನ್ನು ಯು.ಜಿ.ಸಿ., ಮಾರ್ಗಸೂಚಿಗಳನ್ವಯ ದಿನಾಂಕ:23–03–2023 ಹಾಗೂ 21–03–2023ರಂದು ಏರ್ಪಡಿಸಲಾಗಿದ್ದು, ಬಿ.ಓ.ಎ. ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| **ಸ್ನಾತಕೋತ್ತರ ಅಧ್ಯಯನ ವಿಭಾಗಗಳು** | | | | |
| ಡಾ. ರವಿಕುಮಾರ್, ಎಂ., | ಗಣಕವಿಜ್ಞಾನ | ಸಹ ಪ್ರಾಧ್ಯಾಪಕರು Level 13(A) | ಪ್ರಾಧ್ಯಾಪಕರು Level 14 | 18–11–2021* |
| ಡಾ. ಶೃತಿಕೀರ್ತಿ, ಎಂ.ಎ., | ಸಂಸ್ಕೃತ | ಸಹ ಪ್ರಾಧ್ಯಾಪಕರು Level 13(A) | ಪ್ರಾಧ್ಯಾಪಕರು Level 14 | 16–03–2022 |
| ಡಾ. ಸತೀಶ್ ಕುಮಾರ್ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಸಹಾಯಕ ಪ್ರಾಧ್ಯಾಪಕರು AGP-8000 | ಸಹ ಪ್ರಾಧ್ಯಾಪಕರು AGP-9000 | 21–07–2018* |
| | | ಸಹ ಪ್ರಾಧ್ಯಾಪಕರು AGP-9000 | ಪ್ರಾಧ್ಯಾಪಕರು AGP-10000 | 21–07–2021* |
| ಡಾ.ರವೀಂದ್ರಗೌಡ | ದೈಹಿಕ ಶಿಕ್ಷಣ | ಸಹಾಯಕ ನಿರ್ದೇಶಕರು Level 10 | ಸಹಾಯಕ ನಿರ್ದೇಶಕರು Level 11 | 29–12–2021 |
| **ಘಟಕ ಕಾಲೇಜು – ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ** | | | | |
| ಡಾ. ಪವಿತ್ರ, ಜಿ.ಎಂ., | ಗಣಿತಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level – 10 | ಸಹಾಯಕ ಪ್ರಾಧ್ಯಾಪಕರು Level – 11 | 21–03–2021 |
| ಡಾ. ಯುವರಾಜ, ಟಿ.ಸಿ.ಎಂ., | ರಸಾಯನಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕರು Level-13(A) | 31–01–2020 |
| ಶ್ರೀ ಶ್ರೀಕಂಠ, ಎಸ್.ಎ | ರಸಾಯನಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕರು Level-13(A) | 31–01–2020 |
| ಡಾ. ಪರಮೇಶ್ವರ ನಾಯ್ಕ, ಪಿ., | ರಸಾಯನಶಾಸ್ತ್ರ | ಸಹ ಪ್ರಾಧ್ಯಾಪಕರು Level-13(A) | ಪ್ರಾಧ್ಯಾಪಕರು Level-14 | 06–01–2023 |
| ಶ್ರೀಮತಿ ಶಾಂತ, ಎ.ಆರ್., | ಪ್ರಾಣಿಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level – 11 | ಸಹಾಯಕ ಪ್ರಾಧ್ಯಾಪಕರು Level – 12 | 01–07–2017 |
| ಶ್ರೀ ಸುಬ್ರಮಣ್ಯ, ಕೆ., | ಭೌತಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level – 10 | ಸಹಾಯಕ ಪ್ರಾಧ್ಯಾಪಕರು Level – 11 | 05–03–2021 |
| ಡಾ. ಇಬ್ರಾಹಿಂ ಖಲೀಲುಲ್ಲಾ | ಇಂಗ್ಲಿಷ್ | ಸಹಾಯಕ ಪ್ರಾಧ್ಯಾಪಕರು Level – 10 | ಸಹಾಯಕ ಪ್ರಾಧ್ಯಾಪಕರು Level – 11 | 23–01–2014 |



ಕುಲಸಚಿವರು

| | | | | |
|---|---|---|---|---|
| ಘಟಕ ಕಾಲೇಜು – ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | | | | |
| ಶ್ರೀ ಶಿವಾನಂದಸ್ವಾಮಿ, ಕೆ.ಆರ್., | ಇಂಗ್ಲಿಷ್ | ಸಹಾಯಕ ಪ್ರಾಧ್ಯಾಪಕರು Level – 10 | ಸಹಾಯಕ ಪ್ರಾಧ್ಯಾಪಕರು Level – 11 | 30-08-2016 |
| ಡಾ. ಕೆ. ಚಂದ್ರಪ್ಪ | ರಾಜ್ಯಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level – 12 | ಸಹ ಪ್ರಾಧ್ಯಾಪಕರು Level – 13(A) | 29-10-2022 |
| ಶ್ರೀ ಶಫಿಯುಲ್ಲ | ಇತಿಹಾಸ | ಸಹಾಯಕ ಪ್ರಾಧ್ಯಾಪಕರು Level-11 | ಸಹಾಯಕ ಪ್ರಾಧ್ಯಾಪಕ Level-12 | 16-03-2021 |
| ಡಾ.ಬಿ.ಎನ್.ಪ್ರಕಾಶ್ | ಕನ್ನಡ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕ Level-13(A) | 30-01-2023 |
| ಡಾ. ಹಾಲಮ್ಮ, ಎಂ. | ಕನ್ನಡ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕ Level-13(A) | 30-01-2023 |
| ಡಾ.ಡೈಸಿ ಜಾಸ್ಮಿನ್ ಜಾರ್ಜ್ | ಕನ್ನಡ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕ Level-13(A) | 05-03-2022 |
| ಘಟಕ ಕಾಲೇಜು – ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | | | | |
| ಡಾ. ಶುಭ ಮರವಂತೆ | ಕನ್ನಡ | ಸಹಾಯಕ ಪ್ರಾಧ್ಯಾಪಕರು Level-12 | ಸಹ ಪ್ರಾಧ್ಯಾಪಕ Level-13(A) | 22-01-2022 |

* ಅರ್ಹತಾ ದಿನಾಂಕ ಪರಿಷ್ಕರಣೆ

**2023-ಸಿಂ-3.12:** ಡಾ. ಪರಮೇಶ್ವರನಾಯ್ಕ್ ಟಿ, ಪ್ರಾಧ್ಯಾಪಕರು, ಇವರನ್ನು ಬೀದರ್ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಡಾ.ಟಿ.ಪರಮೇಶ್ವರ ನಾಯ್ಕ್, ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರನ್ನು ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022 (ಬೀದರ್), ದಿನಾಂಕ: 28-03-2023ರಲ್ಲಿ ನೂತನವಾಗಿ ಆರಂಭಿವಾಗಿರುವ ಬೀದರ್ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿರುವುದರಿಂದ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಅವರನ್ನು ಕಾಲೇಜಿನ ಸೇವೆಯಿಂದ ಬಿಡುಗಡೆಗೊಳಿಸಿದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2023-ಸಿಂ-3.12 (ಎ)** ವಿವಿಧ ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ School of Languages & Literature, School of Physical Sciences and School of Business Studiesಗಳ ನಿರ್ದೇಶಕರ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಶಾಲಾ ಪರಿಕಲ್ಪನೆಯ ನಿಯಮಾವಳಿಗಳನ್ವಯ ಸೇವಾ ಜೇಷ್ಠತೆಯನ್ವಯ ಎರಡು ವರ್ಷಗಳ ಅವಧಿಗೆ ಈ ಕೆಳಗಿನಂತೆ ನೇಮಕ ಮಾಡಲಾಗಿತ್ತು.

| | | |
|---|---|---|
| 01 | ಡಾ.ಶಿವಾನಂದ ಕೆಳಗಿನಮನಿ, ಪ್ರಾಧ್ಯಾಪಕರು, ಕನ್ನಡ ಭಾರತಿ | School of Languages & Literature |
| 02 | ಡಾ.ಸುಧಾ, ಪ್ರಾಧ್ಯಾಪಕರು, ಭೌತಶಸ್ತ್ರ ಅಧ್ಯಯನ ವಿಭಾಗ | School of Physical Sciences |
| 03 | ಡಾ. ಹೆಚ್.ಎನ್.ರಮೇಶ, ಪ್ರಾಧ್ಯಾಪಕರು, ಸ್ನಾತಕೋತ್ತರ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ | School of Business Studies |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಆದರೆ, ಕ್ರಮ ಸಂಖ್ಯೆ-2ರ School of Physical Sciencesಗೆ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಡಾ.ಸಿ.ಜಿ. ಪ್ರಭಾಕರ, ಪ್ರಾಧ್ಯಾಪಕರು, ಕಂಪ್ಯೂಟರ್ ಸೈನ್ಸ್ ಮತ್ತು ಎಂ.ಸಿ.ಎ. ವಿಭಾಗ ಇವರನ್ನು ಡಾ.ಸುಧಾರವರ ಬದಲಿಗೆ ಪರಿಗಣಿಸಬೇಕಾಗಿದ್ದು, ಪರಿಷ್ಕರಿಸಬೇಕಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಡಾ.ಶಿವಾನಂದ ಕೆಳಗಿನಮನಿ ಹಾಗೂ ಡಾ.ಹೆಚ್.ಎನ್.ರಮೇಶ ಇವರನ್ನು ಶಾಲಾ ನಿರ್ದೇಶಕರಾಗಿ ನೇಮಕ ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿದ ಸಭೆಯು, School of Physical Sciencesಗೆ ಡಾ.ಸುಧಾರವರ ಬದಲಾಗಿ ಡಾ.ಸಿ.ಜಿ. ಪ್ರಭಾಕರರವರನ್ನು ನಿರ್ದೇಶಕರಾಗಿ ನೇಮಕ ಮಾಡಲು ಸಭೆಯು ಅನುಮೊದಿಸಿತು.

**2023-ಸಿಂ-3.12(ಬಿ):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7) ಅನ್ವಯ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಈ ಕೆಳಕಂಡ ವಿಭಾಗಾಧ್ಯಕ್ಷರನ್ನು ನೇಮಕ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

| ಕ್ರ ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ.ಗೋವಿಂದರಾಜು, | ಪ್ರಾಧ್ಯಾಪಕರು | ಭೂವಿಜ್ಞಾನ |
| 02 | ಡಾ.ಎಸ್.ಕೆ. ನರಸಿಂಹಮೂರ್ತಿ | ಪ್ರಾಧ್ಯಾಪಕರು | ಗಣಿತಶಾಸ್ತ್ರ |
| 03 | ಡಾ.ಶಿವಾನಂದ ಕೆಳಗಿನಮನಿ | ಪ್ರಾಧ್ಯಾಪಕರು | ಕನ್ನಡಭಾರತಿ |
| 04 | ಡಾ.ಕುಮಾರಸ್ವಾಮಿ, ಬಿ.ಇ., | ಪ್ರಾಧ್ಯಾಪಕರು | ಔದ್ಯೋಗಿಕ ರಸಾಯನಶಾಸ್ತ್ರ |
| 05 | ಡಾ. ಶೃತಿಕೀರ್ತಿ, ಎಂ.ಎ., | ಸಹ ಪ್ರಾಧ್ಯಾಪಕರು | ಸಂಸ್ಕೃತ |
| 06 | ಡಾ.ಜಗನ್ನಾಥ ಕೆ. ಡಾಂಗೆ | ಪ್ರಾಧ್ಯಾಪಕರು | ಶಿಕ್ಷಣಶಾಸ್ತ್ರ |

**2023-ಸಿಂ-3.12(ಸಿ):** ಪಿ.ಜಿ.ಡಿಪ್ಲೋಮಾ ಇನ್ ಯೋಗ ವಿಭಾಗದ ಅತಿಥಿ ಉಪನ್ಯಾಸಕರುಗಳಿಗೆ ಮಾಸಿಕ ಸಂಭಾವನೆ ಪರಿಷ್ಕರಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಈ ಹಿಂದೆ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಗೌರವ ಸಂಭಾವನೆಯನ್ನು ಪರಿಷ್ಕರಿಸಿರುವ ರೀತಿಯಲ್ಲಿ ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಯೋಗ ವಿಷಯದ ಅತಿಥಿ ಉಪನ್ಯಾಸಕರಿಗೆ ಕೂಡ ಅವರ ಅರ್ಹತೆ ಹಾಗೂ ಸೇವಾ ಅವಧಿ ಪರಿಗಣಿಸಿ ಮಾಸಿಕ ರೂ.30,000/-ಗಳ ಸಂಭಾವನೆಯನ್ನು 2022-23ನೇ ಸಾಲಿನಂದ ಅನ್ವಯವಾಗುವಂತೆ ಒಂದು ವರ್ಷದಲ್ಲಿ ಗರಿಷ್ಠ 10 ತಿಂಗಳುಗಳ ಮಿತಿಗೊಳಪಟ್ಟು ಪರಿಷ್ಕರಿಸಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023-ಸಿಂ-3.12(ಡಿ):** ಶಾಖಾಧಿಕಾರಿ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಭಾರತದ ಸುಪ್ರೀಂ ಕೋರ್ಟ್‌ನ ಬಿ.ಕೆ. ಪವಿತ್ರ ಪ್ರಕರಣದ ಅಂತಿಮ ತೀರ್ಪು ಹಾಗೂ ಸದರಿ ತೀರ್ಪಿನ ಮೇರೆಗೆ ಹೊರಡಿಸಿರುವ ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳ ಮೇರೆಗೆ ವಿಶ್ವವಿದ್ಯಾಲಯವು ಸಿದ್ಧಪಡಿಸಿದ್ದ ದಿನಾಂಕ:31-03-2017ಕ್ಕೆ ಇದ್ದಂತಹ ಅಧ್ಯಾಪಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:29-01-2020ರಂದು ಪ್ರಕಟಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿಯ ಪ್ರಕಾರ ಪ್ರಸ್ತುತ ಅಧೀಕ್ಷಕ ಹುದ್ದೆಯಲ್ಲಿರುವ ನೌಕರರಿಗೆ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಬೇಕಾಗಿದೆ. ಇದರಲ್ಲಿ ಇಬ್ಬರು ಸಹಾಯಕ ಕುಲಸಚಿವ (ಸ್ವತಂತ್ರ ಪ್ರಭಾರ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾಲ್ವರು ಈಗಾಗಲೇ ವಯೋನಿವೃತ್ತಿ ಹೊಂದಿದ್ದಾರೆ. ವಯೋನಿವೃತ್ತಿ ಹೊಂದಿರುವ ನೌಕರರು ಸಹಾಯಕ ಕುಲಸಚಿವ (ಸ್ವತಂತ್ರ ಪ್ರಭಾರ)



ಕುಲಸಚಿವರು

ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವುದರಿಂದ ಅವರಿಗೆ ಸಹಾಯಕ ಕುಲಸಚಿವ ಹುದ್ದೆಗೆ ಜೇಷ್ಠತಾ ಪಟ್ಟಿಯ ಅನುಸಾರ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ನೀಡುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಸಂಧ್ಯಾಕಾವೇರಿರವರು ಮಾತನಾಡುತ್ತಾ, ಕೆಲವರಿಗೆ ನಿವೃತ್ತಿ ನಂತರವೂ ಬಡ್ತಿ ನೀಡಲು ಕ್ರಮ ಕೈಗೊಂಡಿರುವುದು ಸಂತೋಷದ ವಿಷಯವಾದರೂ ಕೂಡ, ನೌಕರರಿಗೆ ಲಭ್ಯ ಬಡ್ತಿ ಮುಂತಾದ ಸೇವಾ ಸೌಲಭ್ಯಗಳನ್ನು ಅವರು ಸೇವೆಯಲ್ಲಿರುವಾಗಲೇ ಅರ್ಹತಾ ದಿನಾಂಕದಂದೇ ನೀಡಿದರೆ ಅನುಕೂಲವಾಗುತ್ತದೆ. ಅವರಿಗೆ ಸಕಾಲದಲ್ಲಿ ಆರ್ಥಿಕ ಸೌಲಭ್ಯಗಳು ಕೂಡ ದೊರೆಯುತ್ತವೆ. ಎಂದರು. ಕುಲಸಚಿವರು ಉತ್ತರಿಸುತ್ತಾ, ಬಿ.ಕೆ.ಪವಿತ್ರಾ ಪ್ರಕರಣದಡಿಯಲ್ಲಿ ಸಿದ್ಧಪಡಿಸಲಾಗಿದ್ದ ಅಧ್ಯಾಪಕೇತರ ನೌಕರರ ದಿನಾಂಕ: 31-03-2017ರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:29-01-2020ರಂದು ಪ್ರಕಟಿಸಲಾಗಿತ್ತು. ಆದರೆ, ಅದನ್ನು ಈವರೆಗೂ ಜಾರಿಗೊಳಿಸಿರಲಿಲ್ಲವಾದ್ದರಿಂದ ಬಹಳಷ್ಟು ಅಧ್ಯಾಪಕೇತರ ನೌಕರರು ಬಡ್ತಿ ವಂಚಿತರಾದರು. ಕೆಲವು ನೌಕರರು ಬಡ್ತಿ ಇಲ್ಲದೇ ನಿವೃತ್ತರಾಗಿದ್ದಾರೆ. ಪ್ರಸ್ತುತ, ಅಂತಿಮ ಜೇಷ್ಠತಾಪಟ್ಟಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬಡ್ತಿ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು. ಎಲ್ಲಾ ಸದಸ್ಯರು ವಿಶ್ವವಿದ್ಯಾಲಯದ ಈ ಕ್ರಮವನ್ನು ಪ್ರಶಂಸಿಸಿದರು. ಡಾ. ಪದ್ಮೇಗೌಡರವರು ಮಾತನಾಡಿ ಇನ್ನು ಮುಂದೆ ಅಧ್ಯಾಪಕೇತರ ನೌಕರರು ನಿವೃತ್ತರಾದ ನಂತರ, ಸದರಿ ಸ್ಥಾನಕ್ಕೆ ಅರ್ಹ ನೌಕರರಿಗೆ ಬಡ್ತಿ ನೀಡುವ ಸಂಪ್ರದಾಯ ಆರಂಭಿಸುವಂತೆ ಸಲಹೆ ನೀಡಿದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಚರ್ಚೆಯ ನಂತರ ಭಾರತದ ಸುಪ್ರೀಂ ಕೋರ್ಟ್‌ನ ಬಿ.ಕೆ. ಪವಿತ್ರ ಪ್ರಕರಣದ ಅಂತಿಮ ತೀರ್ಪು ಹಾಗೂ ಸದರಿ ತೀರ್ಪಿನ ಮೇರೆಗೆ ಹೊರಡಿಸಿರುವ ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳ ಅನ್ವಯ ದಿನಾಂಕ: 31-03-2017ಕ್ಕೆ ಅನ್ವಯವಾಗುವಂತೆ ಸಿದ್ಧಪಡಿಸಿ, ದಿನಾಂಕ:29-01-2020ರಂದು ಪ್ರಕಟಿಸಿರುವ ಅಧ್ಯಾಪಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯ ಪ್ರಕಾರ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲು ಅನುಮೋದನೆ ನೀಡಿದ ಸಭೆಯು, ಇನ್ನು ಮುಂದೆ ಅಧ್ಯಾಪಕೇತರ ನೌಕರರು ನಿವೃತ್ತರಾದ ನಂತರ, ಸದರಿ ಸ್ಥಾನಕ್ಕೆ ಸೇವಾ ಜೇಷ್ಠತೆ, ಅರ್ಹತೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳಡಿಯಲ್ಲಿ ಅರ್ಹ ನೌಕರರಿಗೆ ತಕ್ಷಣವೇ ಬಡ್ತಿ ನೀಡಲು ಕ್ರಮಕೈಗೊಳ್ಳಲು ನಿರ್ಣಯಿಸಿತು.

**2023-ಸಿಂ-3.12(ಇ):** ಶ್ರೀ ಧನಸಿಂಗ್‌ನಾಯ್ಕ್ ಹೆಚ್.ಪಿ. – ಇವರಿಗೆ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಶ್ರೀ ಧನಸಿಂಗ್‌ನಾಯ್ಕ್, ಹೆಚ್.ಪಿ., ಇವರಿಗೆ ಸರ್ಕಾರದ ನಿರ್ದೇಶನ, ದಿನಾಂಕ:23-12-2009ರ ಸಿಂಡಿಕೇಟ್ ನಿರ್ಣಯ ಹಾಗೂ ಕಾನೂನು ಸಲಹೆಗಾರರ ಅಭಿಪ್ರಾಯದ ಮೇರೆಗೆ ದಿನಾಂಕ:01-01-2010ರಿಂದ ಅನ್ವಯವಾಗುವಂತೆ ಪರಿಶಿಷ್ಟ ಜಾತಿ ಮೀಸಲಾತಿ ಅಡಿಯಲ್ಲಿ ಸೂಪರ್‌ನ್ಯೂಮರರಿ ಹುದ್ದೆಯನ್ನು ಸೃಜಿಸಿ, ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿತ್ತು. ನಂತರ ವಿವಿಧ ತಾಂತ್ರಿಕ ಕಾರಣಗಳು ಹಾಗೂ ಭಾರತದ ಸುಪ್ರೀಂ ಕೋರ್ಟ್‌ನ ಬಿ.ಕೆ. ಪವಿತ್ರ ಪ್ರಕರಣದ ಅಂತಿಮ ತೀರ್ಪು ಹಾಗೂ ಸದರಿ ತೀರ್ಪಿನ ಮೇರೆಗೆ ಹೊರಡಿಸಿರುವ ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳ ಮೇರೆಗೆ ವಿಶ್ವವಿದ್ಯಾಲಯವು ಸಿದ್ಧಪಡಿಸಿದ್ದ ಅಧ್ಯಾಪಕೇತರ ನೌಕರರ ದಿನಾಂಕ:31-03-2017ಕ್ಕೆ ಇದ್ದಂತೆ ದಿನಾಂಕ:29-01-2020ರಂದು ಪ್ರಕಟಿಸಲಾದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆ, ಮುಂತಾದ ಕಾರಣಗಳಿಂದ ಅವರಿಗೆ ಪೂರ್ಣಪ್ರಮಾಣದ ಸಹಾಯಕ ಕುಲಸಚಿವರಾಗಿ ಬಡ್ತಿ ನೀಡದೇ, ಸೂಪರ್‌ನ್ಯೂಮರರಿ ಹುದ್ದೆಯಲ್ಲಿಯೇ ಮುಂದುವರಿಸಿಕೊಂಡು ಬರಲಾಗಿತ್ತು. ಆದರೆ, ಮುಂಬಡ್ತಿಗೆ ಸಂಬಂಧಪಟ್ಟಂತೆ ಶ್ರೀ ಧನಸಿಂಗ್‌ನಾಯ್ಕ್, ಹೆಚ್.ಪಿ., ಇವರು ಸಲ್ಲಿಸಿದ್ದ ದೂರಿಗೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಮುಂದೆ ರಿಕ್ತ ಸ್ಥಾನಗಳು ಲಭ್ಯವಾದಾಗ ನಿಯಮಾನುಸಾರ ಬಡ್ತಿ ನೀಡುವುದಾಗಿ ಮಾಹಿತಿ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಪ್ರಕಟಿಸಿರುವ ದಿನಾಂಕ:31-03-2017ಕ್ಕೆ ಅನ್ವಯವಾಗುವ ಅಂತಿಮ ಜೇಷ್ಠತಾ ಪಟ್ಟಿ ಹಾಗೂ ಮೀಸಲಾತಿ ನಿಯಮಗಳಡಿಯಲ್ಲಿ ದಿನಾಂಕ:01-08-2022ಕ್ಕೆ ರಿಕ್ತಸ್ಥಾನ ಲಭ್ಯವಾಗಿದ್ದು, ಸದರಿ ದಿನಾಂಕದಿಂದ ಅನ್ವಯವಾಗುವಂತೆ ಸಹಾಯಕ ಕುಲಸಚಿವ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲು ಅನುಮೋದನೆಗಾಗಿ ಮಂಡಿಸಿದೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

**ನಿರ್ಣಯ:** ಚರ್ಚೆಯ ನಂತರ ಶ್ರೀ ಧನಸಿಂಗ್‌ನಾಯ್ಕ್, ಹೆಚ್.ಪಿ. ಇವರಿಗೆ ಸರ್ಕಾರದ ಆದೇಶಗಳು, ವಿಶ್ವವಿದ್ಯಾಲಯ ಪ್ರಕಟಿಸಿರುವ ದಿನಾಂಕ:31-03-2017ಕ್ಕೆ ಅನ್ವಯವಾಗುವ ಅಂತಿಮ ಜೇಷ್ಠತಾ ಪಟ್ಟಿ ಹಾಗೂ ಮೀಸಲಾತಿ ನಿಯಮಗಳಡಿಯಲ್ಲಿ ದಿನಾಂಕ:01-08-2022ಕ್ಕೆ ಲಭ್ಯವಾಗಿರುವ ರಿಕ್ತಸ್ಥಾನವನ್ನು ಪರಿಗಣಿಸಿ, ಸದರಿ ದಿನಾಂಕದಿಂದ ಅನ್ವಯವಾಗುವಂತೆ ಸಹಾಯಕ ಕುಲಸಚಿವ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲು ಸಭೆಯು ಅನುಮೋದನೆ ನೀಡಿತು.

**2023-ಸಿಂ-3.12 (ಎಫ್)** ಡಾ.ರಿಯಾಜ್ ಮಹಮೂದ್, ಪ್ರಾಧ್ಯಾಪಕರು – ಇವರನ್ನು ಗೌರವ ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ಡಾ.ರಿಯಾಜ್ ಮಹಮೂದ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗ–ಇವರು ದಿನಾಂಕ:30-06-2023ರಂದು ವಯೋನಿವೃತ್ತಿ ಹೊಂದಲಿದ್ದಾರೆ. ಅವರು ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ, ಡೀನರಾಗಿ, ವಿವಿಧ ವಿಭಾಗಗಳ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದು, ಕಳೆದ ಬಾರಿ ನ್ಯಾಕ್ ಪೀರ್ ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ಕೂಡ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಪ್ರಸ್ತುತ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಪೀರ್ ಸಮಿತಿ ಭೇಟಿ ನೀಡುತ್ತಿರುವುದರಿಂದ ಅವರ ಅನುಭವ ಹಾಗೂ ಸೇವೆ ವಿಶ್ವವಿದ್ಯಾಲಯಕ್ಕೆ ಅಗತ್ಯವಿದೆ. ಆದುದರಿಂದ, ಅವರ ಸೇವೆಯನ್ನು ಮಾಸಿಕ ರೂ.40,000/–ಗಳ ಗೌರವಧನದ ಆಧಾರದಲ್ಲಿ ಮುಂದುವರಿಸುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಪ್ರೊ.ಚಂದ್ರಶೇಖರ್‌ರವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಸಮಿತಿ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಪ್ರೊ. ರಿಯಾಜ್ ಮಹಮೂದ್‌ರವರ ಸೇವೆ ಅಗತ್ಯವಿದ್ದು, ಹೆಚ್ಚಿನ ಗೌರವಧನ ನಿಗದಿಪಡಿಸುವಂತೆ ಕೋರಿದರು. ಉಳಿದ ಸದಸ್ಯರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಮಾನ್ಯ ಕುಲಪತಿಯವರು ಮಾತನಾಡುತ್ತಾ, ಈ ಹಿಂದಿನ ಸಾಲಿನಲ್ಲಿ ನ್ಯಾಕ್ ಸಮಿತಿಯ ಭೇಟಿ ಸಮಯದಲ್ಲಿ ನಿವೃತ್ತ ಪ್ರಾಧ್ಯಾಪಕರಾಗಿದ್ದ ಪ್ರೊ.ರಾಜೇಂದ್ರ ಚೆನ್ನಿರವರ ಸೇವೆಯನ್ನು ಬಳಸಿಕೊಂಡಿದ್ದು, ಅವರಿಗೆ ಮಾಸಿಕ ರೂ.25,000/–ಗಳನ್ನು ಪಾವತಿಸಲಾಗುತ್ತಿತ್ತು. ಈಗ ರೂ.40,000/–ಗಳಿಗೆ ಶಿಫಾರಸು ಮಾಡಿದೆ ಎಂದರು. ಹಿರಿಯ ಪ್ರಾಧ್ಯಾಪಕರಿಗೆ ಅತಿಥಿ ಉಪನ್ಯಾಸಕರಿಗಿಂತ ಕಡಿಮೆ ಗೌರವಧನ ನಿಗದಿಪಡಿಸುವುದು ಸಮಂಜಸವಲ್ಲ. ಆದುದರಿಂದ, ಕನಿಷ್ಠ ರೂ.60,000/–ಗಳನ್ನು ನಿಗದಿಪಡಿಸಬಹುದು ಎಂದು ಎಲ್ಲಾ ಸದಸ್ಯರು ತಿಳಿಸಿದರು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ನ್ಯಾಕ್ ಪೀರ್ ಸಮಿತಿ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ, ದಿನಾಂಕ:30-06-2023ರಂದು ವಯೋನಿವೃತ್ತಿ ಹೊಂದುತ್ತಿರುವ ಪ್ರೊ.ರಿಯಾಜ್ ಮಹಮೂದ್, ಸ್ನಾತಕೋತ್ತರ ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗ – ಇವರ ಸೇವೆಯನ್ನು ನ್ಯಾಕ್ ಸಮಿತಿ ಬಂದುಹೋಗುವವರೆಗೂ ವಿಸ್ತರಿಸಲು ಹಾಗೂ ಅವರಿಗೆ ಮಾಸಿಕ ರೂ.60,000/- ಗಳ ಗೌರವ ಸಂಭಾವನೆ ಪಾವತಿಸಲು ಸಭೆಯು ಅನುಮೋದಿಸಿತು.

## ಅಭಿವೃದ್ಧಿ ವಿಭಾಗ

**2023-ಸಿಂ-3.13:** ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗವನ್ನು Research & Development Cell ನ್ನಾಗಿ ಸ್ಥಾಪಿಸುವ ಹಾಗೂ ಅಭಿವೃದ್ಧಿ ವಿಭಾಗದ ಉಪಕುಲಸಚಿವ ಹುದ್ದೆಯನ್ನು ನಿರ್ದೇಶಕರು, ಸಂಶೋಧನೆ ಮತ್ತು ಅಭಿವೃದ್ಧಿ ಘಟಕ (Director, Research & Development Cell) (Development Cell) ಆಗಿ ಪುನರ್ ನಾಮಕರಣ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಭಾರತ ಸರ್ಕಾರವು ಹೊಸ ಶಿಕ್ಷಣ ನೀತಿ–2020ನ್ನು ಜಾರಿಗೊಳಿಸಿದ ನಂತರ ಯು.ಜಿ.ಸಿ.ಯು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಸಂಶೋಧನೆಯನ್ನು ಅಭಿವೃದ್ಧಿಪಡಿಸುವ ಮತ್ತು ಬಲಪಡಿಸುವ ದೃಷ್ಟಿಯಿಂದ Research & Development Cell ನ್ನು ಸ್ಥಾಪಿಸುವಂತೆ ತಿಳಿಸಿದೆ. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿರುವ ಅಭಿವೃದ್ಧಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ವಿಭಾಗವು ಯು.ಜಿ.ಸಿ., ಸುತ್ತೋಲೆಯಲ್ಲಿ ತಿಳಿಸಿರುವಂತೆಯೇ ಸಂಶೋಧನೆ/ನಾವೀನ್ಯತೆ/ತಂತ್ರಜ್ಞಾನ/ ಸಂಶೋಧನಾ ಒಡಂಬಡಿಕೆ/ ಪೇಟೆಂಟ್ಸ್ ಮುಂತಾದ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಉಪಕುಲಸಚಿವರು ಇದರ ಮುಖ್ಯಸ್ಥರಾಗಿದ್ದಾರೆ. ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗವು Research & Development ಕಾರ್ಯಗಳನ್ನೇ ನಿರ್ವಹಿಸುತ್ತಿರುವುದರಿಂದ, ಅಭಿವೃದ್ಧಿ ವಿಭಾಗವನ್ನು Research & Development Cell ಎಂದು ಮರುನಾಮಕರಣ ಮಾಡಬಹುದಾಗಿದ್ದು, ಅಭಿವೃದ್ಧಿ ವಿಭಾಗದ ಉಪಕುಲಸಚಿವರ ಪದನಾಮವನ್ನು ಕೂಡ Director, Research & Development Cell (ನಿರ್ದೇಶಕರು, ಸಂಶೋಧನೆ ಮತ್ತು ಅಭಿವೃದ್ಧಿ ಘಟಕ) ಎಂದು ಮರುನಾಮಕರಣ ಮಾಡಬಹುದು. ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಅಧ್ಯಾಪಕೇತರ ನೌಕರರ ಹುದ್ದೆಗಳಲ್ಲಿ Director of Research Programme ಎಂಬುದು ಇದ್ದು, ಈವರೆಗೆ ನೇಮಕವಾಗಿಲ್ಲದಿರುವುದರಿಂದ ಖಾಲಿ ಇರುತ್ತದೆ. ಆದುದರಿಂದ, ಈ ಹುದ್ದೆಯನ್ನೇ ರೀ ಡಿಪ್ಲಾಯ್ ಮಾಡಿಕೊಂಡು Director, Research & Development Cellಗೆ ಬಳಸಿಕೊಳ್ಳಬಹುದಾಗಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಯು.ಜಿ.ಸಿ.ಯ ನಿರ್ದೇಶನದಂತೆ, ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗವನ್ನು Research & Development Cell ಎಂದು ಮರುನಾಮಕರಣ ಮಾಡಲು ಹಾಗೂ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿ ಖಾಲಿ ಇರುವ ಹುದ್ದೆಯನ್ನು ರೀ ಡಿಪ್ಲಾಯ್ ಮಾಡಿಕೊಂಡು ಉಪಕುಲಸಚಿವ, ಅಭಿವೃದ್ಧಿ ವಿಭಾಗ ಎಂಬುದರ ಪದನಾಮದ ಬದಲಾಗಿ Director, Research & Development Cell (ನಿರ್ದೇಶಕರು, ಸಂಶೋಧನೆ ಮತ್ತು ಅಭಿವೃದ್ಧಿ ಘಟಕ) ಎಂದು ಮರುನಾಮಕರಣ ಮಾಡಲು ಸಭೆಯು ಅನುಮೋದಿಸಿತು.

**2023–ಸಿಂ–3.13(ಎ):** ಡಾ. ಲತಾ ಕೆ.ಪಿ. ಪ್ರಾಧ್ಯಾಪಕರು, ಸ್ನಾತಕ ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ – ಇವರ ಭೂತಾನದಲ್ಲಿ ಜರುಗುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಡಾ.ಕೆ.ಪಿ. ಲತಾ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರು Nisragankur Ayurveda ಸಂಸ್ಥೆಯವರು ಥಿಂಪು, ಭೂತಾನ್ ಇಲ್ಲಿ ದಿನಾಂಕ:25–05–2023 ರಿಂದ 31–05–2023ರವರೆಗೆ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧ ಮಂಡಿಸಲು ಅನುಮತಿಸಿದ ಸಭೆಯು, ಅವರಿಗೆ ನೋಂದಣಿ ಶುಲ್ಕ ಗರಿಷ್ಟ ರೂ.1,000/–ಗಳು ಹಾಗೂ ವಿಮಾನಯಾನ ಪ್ರಯಾಣ ಭತ್ಯೆ, ನಿಯಮಾನುಸಾರ ಲಭ್ಯ ದಿನಭತ್ಯೆ ಸೇರಿದಂತೆ ಒಟ್ಟು ವೆಚ್ಚಗಳಲ್ಲಿನ ಶೇ.50ರಷ್ಟನ್ನು ಕಾಲೇಜಿನ ಆಯವ್ಯಯದ ಆರ್ಥಿಕ ಲಭ್ಯತೆ ಅನುಸಾರ ಪಾವತಿಸಲು ಮಂಜೂರಾತಿ ನೀಡಲು ಮತ್ತು ಪ್ರಯಾಣ ದಿನಗಳು ಸೇರಿದಂತೆ ದಿನಾಂಕ:24–05–2023 ರಿಂದ 01–06–2023ರವರೆಗೆ ಅನ್ಯಕಾರ್ಯ ನಿಮಿತ್ತ ಮಂಜೂರು ಮಾಡಲು ಸಭೆಯು ನಿರ್ಣಯಿಸಿತು.

**2023–ಸಿಂ–3.13(ಬಿ):** ಡಾ. ಆಂಜನಪ್ಪ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಶಂಕರಘಟ್ಟ – ಇವರು ಆಸ್ಟ್ರೇಲಿಯಾ ದೇಶದ ಮೇಲ್ಬೋರ್ನ್‌ನಲ್ಲಿ 20ನೇ ಅಂತರಾಷ್ಟ್ರೀಯ ಸಮಾಜಶಾಸ್ತ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಡಾ.ಅಂಜನಪ್ಪ, ಬಿ.ಹೆಚ್., ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ – ಇವರು ISA World Congress of Sociology ಇವರು Melbourne, Australia ಇಲ್ಲಿ ದಿನಾಂಕ:22–06–2023 ರಿಂದ 04–07–2023ರವರೆಗೆ ಏರ್ಪಡಿಸಿರುವ 20ನೇ ಅಂತರರಾಷ್ಟ್ರೀಯ ಸಮಾಜಶಾಸ್ತ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧ ಮಂಡಿಸಲು ಅನುಮತಿಸಿದ ಸಭೆಯು, ಅವರಿಗೆ ನೋಂದಣಿ ಶುಲ್ಕ ಗರಿಷ್ಟ $200 ಗಳು ಹಾಗೂ ವಿಮಾನಯಾನ ಪ್ರಯಾಣ ಭತ್ಯೆ, ನಿಯಮಾನುಸಾರ ಲಭ್ಯ ದಿನಭತ್ಯೆ ಸೇರಿದಂತೆ ಒಟ್ಟು ವೆಚ್ಚಗಳಲ್ಲಿನ ಶೇ.50ರಷ್ಟನ್ನು ವಿಶ್ವವಿದ್ಯಾಲಯದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಆರ್ಥಿಕ ಲಭ್ಯತೆ ಅನುಸಾರ ಪಾವತಿಸಲು ಮಂಜೂರಾತಿ ನೀಡಲು ಮತ್ತು ಪ್ರಯಾಣ ದಿನಗಳು ಸೇರಿದಂತೆ ದಿನಾಂಕ:22-06-2023 ರಿಂದ 04-07-2023ರವರೆಗೆ ಅನ್ಯಕಾರ್ಯ ನಿಮಿತ್ತ ಮಂಜೂರು ಮಾಡಲು ಸಭೆಯು ನಿರ್ಣಯಿಸಿತು.

## ದಾಸ್ತಾನು ಖರೀದಿ ವಿಭಾಗ

**2023-ಸಿಂ-3.13(ಸಿ):** ಕೋರಿಯರ್ ಸೇವೆಯನ್ನು ಮುಂದುವರೆಸುವ ಬಗ್ಗೆ

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳಿಂದ ರವಾನಿಸಲ್ಪಡುವ ಪತ್ರ ಹಾಗೂ ಪಾರ್ಸೆಲ್‌ಗಳನ್ನು ಕೋರಿಯರ್ ಮೂಲಕ ರವಾನಿಸಲು ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ದಿ. ಪ್ರೊಫೆಷನಲ್ ಕೋರಿಯರ್, ಶಿವಮೊಗ್ಗ ಇವರೊಂದಿಗೆ ದಿನಾಂಕ: 16-04-2021ರಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಎಂಬುದಾಗಿ ದರ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸದರಿ ದರ ಒಪ್ಪಂದದ 2 ವರ್ಷಗಳ ಅವಧಿಯು ದಿನಾಂಕ: 15-04-2023 ಕ್ಕೆ ಮುಕ್ತಾಯಗೊಂಡಿದ್ದು, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಇ-ಟೆಂಡರ್ ಪ್ರಕ್ರಿಯೆ ನಡೆಸಲು ಅವಕಾಶವಿರಲಿಲ್ಲವಾದ್ದರಿಂದ ಹೊಸದಾಗಿ ಇ-ಟೆಂಡರ್ ಪ್ರಕ್ರಿಯೆ ಕೈಗೊಂಡು ಕರಾರು ಒಪ್ಪಂದ ಮಾಡಿಕೊಳ್ಳುವವರೆಗೆ ಪ್ರಸ್ತುತ ಸೇವೆ ಒದಗಿಸುತ್ತಿರುವ ಶ್ರೀ ಬಿ.ಪ್ರೇಮಪ್ರಕಾಶ್, ದಿ. ಪ್ರೊಫೆಷನಲ್ ಕೋರಿಯರ್, ಶಿವಮೊಗ್ಗ ಇವರ ಸೇವೆಯನ್ನು ಹಿಂದಿನ ದರದಲ್ಲಿಯೇ ಮುಂದುವರೆಸಲು ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**2023-ಸಿಂ-3.13(ಡಿ):** ಬಿ.ಇಡಿ. ಪದವಿಯ ಮಾನಿಟರಿಂಗ್ ಸಮಿತಿ ಅಧ್ಯಕ್ಷರು:ಸದಸ್ಯರ ಭತ್ಯೆ ನಿಗದಿಪಡಿಸಿರುವ ಕುರಿತು

**ನಿರ್ಣಯ:** ಬಿ.ಇಡಿ. ಮಾನಿಟರಿಂಗ್ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸಮಿತಿ ಭೇಟಿಯ ಅವಧಿಯಲ್ಲಿ ಅಧಿಕ ಕಾರ್ಯಭಾರದ ಒತ್ತಡದಿಂದಾಗಿ ಕೆಲವು ಸ್ಥಳಗಳಲ್ಲಿ ವಾಸ್ತವ್ಯ ಮಾಡಬೇಕಾಗಿರುವುದರಿಂದ ವಿಶ್ವವಿದ್ಯಾಲಯ ನೀಡುತ್ತಿರುವ ಊಟೋಪಚಾರ ಹಾಗೂ ವಾಸ್ತವ್ಯ ಭತ್ಯೆಯನ್ನು ದಿನವೊಂದಕ್ಕೆ ರೂ.1,500/-ಗಳಿಗೆ ಪರಿಷ್ಕರಿಸಿ ದಿನಾಂಕ:18-03-2023ರಂದು ನಡೆದ ವಿದ್ಯಾ ವಿಷಯಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆ ನೀಡಿರುವ ಮೇರೆಗೆ ಪರಿಷ್ಕೃತ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2023-ಸಿಂ-3.13(ಇ):** 2023-24ನೇ ಸಾಲಿನ ಸಂಯೋಜನೆ ಶುಲ್ಕಗಳನ್ನು ಪರಿಷ್ಕರಿಸುವುದನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗೆ ಮಂಡಿಸುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, 2023ರ ಕರ್ನಾಟಕ ವಿಧಾನಸಭೆ ಚುನಾವಣೆಯ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, 2023-24ನೇ ಸಾಲಿನ ಸಂಯೋಜನಾ ಶುಲ್ಕಗಳನ್ನು ಶೇ.20ರಷ್ಟು ಹೆಚ್ಚಿಸಿ ಪರಿಷ್ಕರಿಸಲಾಗಿದ್ದು, ಇದನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಸಂಧ್ಯಾಕಾವೇರಿ ರವರು ಮಾತನಾಡಿ, ಬಿ.ಎಸ್.ಡಬ್ಲ್ಯೂ ಕೋರ್ಸ್‌ನ್ನು ವೃತ್ತಿಪರ ಎಂದು ಪರಿಗಣಿಸಿ, ಅಧಿಕ ಶುಲ್ಕ ನಿಗದಿ ಮಾಡಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಈ ಕೋರ್ಸ್‌ಗೆ ವಿದ್ಯಾರ್ಥಿಗಳ ಪ್ರವೇಶವು ಗಣನೀಯವಾಗಿ ಕಡಿಮೆಯಾಗಿದೆ. ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಿದ್ದು, ಪದವೀಧರರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಕೂಡ ದೊರೆಯುತ್ತಿಲ್ಲ. ಅಲ್ಲದೇ, ಕಾಲೇಜುಗಳಲ್ಲಿ ಬಿ.ಎ., ಮುಂತಾದ ಕೋರ್ಸ್‌ಗಳಿಗೆ ಪಡೆಯುವಷ್ಟು ಶುಲ್ಕವನ್ನೇ ಬಿ.ಎಸ್.ಡಬ್ಲ್ಯೂ., ಕೋರ್ಸ್‌ಗೆ ಪಡೆಯಲಾಗುತ್ತಿದೆ. ಇದರಲ್ಲಿ ಕಾಲೇಜಿನ ಕೆಲವು ಶೈಕ್ಷಣಿಕ ವೆಚ್ಚಗಳನ್ನು ಕೂಡ ಭರಿಸಿ, ಹೆಚ್ಚಿನ ಸಂಯೋಜನಾ ಶುಲ್ಕ ಪಾವತಿಸಲು ಕಷ್ಟವಾಗುತ್ತದೆ. ಆದುದರಿಂದ, ಬಿ.ಎ., ಕೋರ್ಸ್‌ಗೆ ನಿಗದಿಪಡಿಸಿರುವಷ್ಟು ಶುಲ್ಕವನ್ನು ಬಿ.ಎಸ್.ಡಬ್ಲ್ಯೂ., ಕೋರ್ಸ್‌ಗೆ ಕೂಡ ವಿಧಿಸುವಂತೆ ಕೋರಿದರು. ಸದಸ್ಯರಾದ, ಡಾ.ಎ.ಟಿ. ಪದ್ಮೇಗೌಡರವರು ಮಾತನಾಡಿ, ಬಿ.ಎ., ಕೋರ್ಸ್‌ಗೆ ಕೂಡ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ವಿದ್ಯಾರ್ಥಿಗಳ ಪ್ರವೇಶ ಗಣನೀಯವಾಗಿ ಕಡಿಮೆಯಾಗಿದ್ದು, ವಿದ್ಯಾರ್ಥಿಗಳು ಪಾವತಿಸುವ ಶುಲ್ಕ ಬಹಳ ಕಡಿಮೆ ಇದೆ. ಇದರಿಂದಾಗಿ ಆಡಳಿತ ಮಂಡಳಿಯವರು ಹೆಚ್ಚಿನ ಸಂಯೋಜನಾ ಶುಲ್ಕ ಪಾವತಿಸುವ ಕುರಿತು ಆಕ್ಷೇಪ ವ್ಯಕ್ತಪಡಿಸಿರುವುದರಿಂದ, ಸಂಯೋಜನಾ ಶುಲ್ಕವನ್ನು ಕಡಿಮೆ ಮಾಡುವಂತೆ ಕೋರಿದರು. ಸದಸ್ಯರುಗಳಾದ ಡಾ.ಎಂ.ಸ್ವಾಮಿ ಹಾಗೂ ಶ್ರೀ ವಿನಯ್‌ಕುಮಾರ್ ಶೆಟ್ಟಿ ಇವರುಗಳು ಕೂಡ ಸಂಯೋಜನಾ ಶುಲ್ಕವನ್ನು ಕಡಿಮೆ ಮಾಡುವಂತೆ ಕೋರಿದರು. ಸದಸ್ಯರಾದ ಶ್ರೀ ಎಸ್.ಆರ್. ಮಂಜುನಾಥರವರು ಕೂಡ ಮಾತನಾಡಿ ಎನ್.ಇ.ಪಿ.ಯಿಂದಾಗಿ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಡಿಮೆಯಾಗಿದೆ. ಇದರಿಂದಾಗಿ ಕಾಲೇಜುಗಳು ಶೈಕ್ಷಣಿಕ ವೆಚ್ಚಗಳನ್ನು ಭರಿಸಿಕೊಂಡು ಹೆಚ್ಚಿನ ಸಂಯೋಜನಾ ಶುಲ್ಕ ಪಾವತಿಸಲು ಕಷ್ಟವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರು ಸಭೆಗೆ ಹಾಜರಾಗಿ ಮಾಹಿತಿ ನೀಡಿ ಮಾತನಾಡುತ್ತಾ, ಕೋವಿಡ್-2019ರ ಕಾರಣದಿಂದಾಗಿ ಕಳೆದ ಎರಡು ವರ್ಷಗಳಿಂದ ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸಿಲ್ಲ. ಹಳೆಯ ವ್ಯವಸ್ಥೆ ಪ್ರಕಾರ ಎರಡು ಮೂರು ಕೋರ್ಸ್‌ಗಳಿಗೆ ಸೇರಿ ಒಂದೇ ಶುಲ್ಕ ಇರುತ್ತಿತ್ತು. ಆದರೆ, ಈಗ ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್ ಆಗಿರುವುದರಿಂದ ಪ್ರತಿಯೊಂದು ಕೋರ್ಸ್‌ನ್ನೂ ಕೂಡ ಪ್ರತ್ಯೇಕವಾಗಿ ಪರಿಗಣಿಸುತ್ತಿದ್ದು, ಪ್ರತ್ಯೇಕ ಶುಲ್ಕ ನಿಗದಿಪಡಿಸಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕೋವಿಡ್ ಕಾರಣದಿಂದ ಕಳೆದೆರಡು ವರ್ಷಗಳಲ್ಲಿ ಯಾವುದೇ ಶುಲ್ಕಗಳನ್ನು ಪರಿಷ್ಕರಿಸಿಲ್ಲ. ಸರ್ಕಾರದಿಂದ ಕೂಡ ಅಭಿವೃದ್ಧಿ ಅನುದಾನ ಬಿಡುಗಡೆಯಾಗಿಲ್ಲ. ಆಂತರಿಕ ಸಂಪನ್ಮೂಲ ಕಡಿಮೆಯಾಗುತ್ತಿದ್ದು, ಅತಿಥಿ ಉಪನ್ಯಾಸಕರ ವೇತನ, ಹೊರಗುತ್ತಿಗೆ ನೌಕರರ ವೇತನ ಸೇರಿದಂತೆ ಆಡಳಿತಾತ್ಮಕ ಮತ್ತು ಶೈಕ್ಷಣಿಕ ವೆಚ್ಚಗಳಲ್ಲಿ ಹೆಚ್ಚಳವಾಗಿದೆ. ಆದುದರಿಂದ, ಶುಲ್ಕ ಕಡಿತಗೊಳಿಸುವುದು ಕಷ್ಟವಾಗುತ್ತದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ತುರ್ತಾಗಿ ಕಾಲೇಜು ಅಭಿವೃದ್ಧಿ ಪರಿಷತ್ತಿನ ಸಲಹಾ ಸಮಿತಿಯ ವಿಶೇಷ ಸಭೆ ಕರೆದು ಸಾಧಕ ಬಾಧಕಗಳನ್ನು ಚರ್ಚಿಸಿ ಸಂಯೋಜನಾ ಶುಲ್ಕಗಳನ್ನು ಕಡಿತಗೊಳಿಸಿ ಪರಿಷ್ಕರಿಸುವ ಬಗ್ಗೆ ತೀರ್ಮಾನಿಸುವಂತೆ ಸಭೆಯು ನಿರ್ಣಯಿಸಿತು.

## ಎಸ್ಟೇಟ್ ವಿಭಾಗ

**2023-ಸಿಂ-3.13(ಈ):** ಪೌರಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಟ ವೇತನ (Minimum Wages) ದರಗಳಲ್ಲಿ ವಿಶ್ವವಿದ್ಯಾಲಯದ ಸ್ವಚ್ಛತಾ ಸಿಬ್ಬಂದಿಗೆ ವೇತನ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಾದ ಶ್ರೀ ಕೆ.ಚಂದ್ರರವರು ಹಾಸ್ಟೆಲ್, ವಸತಿಗೃಹಗಳು, ಶೈಕ್ಷಣಿಕ ಹಾಗೂ ಆಡಳಿತ ಕಟ್ಟಡಗಳಲ್ಲಿರುವ ಶೌಚಾಲಯಗಳು ಕಟ್ಟಿಕೊಂಡಾಗ ದುರಸ್ತಿ ಮಾಡುವುದು, ಚರಂಡಿಗಳ ಸ್ವಚ್ಛತೆ ಸೇರಿದಂತೆ ಬಹಳ ಅನಿವಾರ್ಯದ ಹಾಗೂ ಇತರರು ನಿರ್ವಹಿಸಲು ಅಸಹ್ಯಪಡುವಂತಹ (Scavenging) ಕೆಲಸಗಳನ್ನು ಕೂಡ ನಿರ್ವಹಿಸುತ್ತಿದ್ದು, ಇವರಿಗೆ ಇತರೆ ಏಜನ್ಸಿ ನೌಕರರಿಗೆ ನೀಡುವಂತೆಯೇ ರೂ.12,242/-ಗಳಷ್ಟು ಕನಿಷ್ಟ ವೇತನ ಪಾವತಿಸಲಾಗುತ್ತಿದೆ. ಆದರೆ, ಸರ್ಕಾರದ ನಗರ ಸ್ಥಳಿಯ ಸಂಸ್ಥೆಗಳು ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಇದೇ ರೀತಿಯ ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ರೂ.17,562/-ಗಳಷ್ಟು ಕನಿಷ್ಠ ವೇತನ ನೀಡಲಾಗುತ್ತಿದೆ. ಆದುದರಿಂದ, ಸ್ವಚ್ಛತಾ ವಿಭಾಗದಲ್ಲಿ ಪೌರ ಕಾರ್ಮಿಕರ ರೀತಿಯ ಅತ್ಯಾವಶ್ಯಕ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಹೆಚ್ಚುವರಿಯಾಗಿ ಮಾಸಿಕ ರೂ.5000/-ಗಳನ್ನು ಪಾವತಿಸಲು ಸಲುವಾಗಿ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ Scavenging ಕೆಲಸಗಳನ್ನು ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಾದ ಶ್ರೀ ಕೆ.ಚಂದ್ರರವರು ಪ್ರಸ್ತುತ ಪಡೆಯುತ್ತಿರುವ ವೇತನದ ಜೊತೆಗೆ ಯಾವುದೇ ಕಟಾವಣೆಗಳಿಲ್ಲದೆ ಪ್ರತಿ ಮಾಹೆ ರೂ.5,000/-ಗಳನ್ನು ವಿಶ್ವವಿದ್ಯಾಲಯದ "ಆಸರೆ" ಶೀರ್ಷಿಕೆಯಿಂದ ಭರಿಸಿ, ಜೂನ್-2023ರ ಮಾಹೆಯಿಂದ ಅನ್ವಯವಾಗುವಂತೆ ಪಾವತಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

## ಯು.ಸಿ.ಸಿ.ಎಫ್. ವಿಭಾಗ

**2023–ಸಿಂ–3.13 (ಎಫ್):** ವಿಶ್ವವಿದ್ಯಾಲಯಕ್ಕೆ ಅಕಾಡೆಮಿಕ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಸರಬರಾಜು ಸಂಬಂಧ ಮೆ: ಕಿಯೋನಿಕ್ಸ್ ಸಂಸ್ಥೆಗೆ ಉಳಿಕೆ ಮೊತ್ತವನ್ನು ಪಾವತಿಸುವ ಕುರಿತು ಅನುಮೋದನೆಗಾಗಿ ದಿನಾಂಕ: 19–05–2023 ರಂದು ಜರುಗಲಿರುವ ಸಿಂಡಿಕೇಟ್ ಸಭೆಗೆ ಮಂಡಿಸುತ್ತಿರುವ ವಿಷಯ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯವು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಸಂಬಂಧ ಎರಡು ವರ್ಷಗಳ ಅವಧಿಗೆ ಬಳಸಲು ಸರ್ಕಾರದ ಸಂಸ್ಥೆಯಾದ ಕಿಯೋನಿಕ್ಸ್, ಬೆಂಗಳೂರು ವತಿಯಿಂದ ಅಕಾಡೆಮಿಕ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್‌ನ್ನು ಖರೀದಿಸಿದ್ದು, ಅದನ್ನು 2020–21ರ ಸಾಲಿನಲ್ಲಿ ಬಳಸಿಕೊಳ್ಳಲಾಗಿದೆ. ಈ ಸಂಬಂಧ ಸದರಿಯವರಿಗೆ ಕಾರ್ಯಾದೇಶ ಮತ್ತು ಕರಾರಿನನ್ವಯ ಮುಂಗಡವಾಗಿ ಒಟ್ಟು ಮೊತ್ತದ ಶೇ.30ರಷ್ಟನ್ನು ಪಾವತಿಸಲಾಗಿದೆ. ಆದರೆ, 2021–22ರ ಸಾಲಿನ ಪ್ರವೇಶಾತಿ ಕಾರ್ಯವನ್ನು ಕೈಗೊಳ್ಳುವ ಪೂರ್ವದಲ್ಲಿ ಹಲವು ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ದಿನಾಂಕ:30–11–2021ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಸದರಿ ಸಾಫ್ಟ್‌ವೇರ್‌ನ್ನು ಬಳಸುವುದು ಬೇಡವೆಂದು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ, ಅದನ್ನು ನಂತರದ ವರ್ಷಗಳಲ್ಲಿ ಬಳಸಿಕೊಂಡಿಲ್ಲ. ಆದರೆ. ಸದರಿ ಸಂಸ್ಥೆಯವರು ಕರಾರಿನನ್ವಯ ಎರಡು ವರ್ಷಗಳ ಅವಧಿಗೆ ಸರಬರಾಜು ಮಾಡಿದ್ದು, ತಂತ್ಸಂಬಂಧ ಉಳಿಕೆ ಮೊತ್ತ ಶೇ.70ರಷ್ಟನ್ನು (ರೂ.69,97,862/–) ಪಾವತಿಸುವಂತೆ ಆಗ್ರಹಿಸಿರುತ್ತಾರೆ. ಈ ಕುರಿತಾಗಿ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆಯಲಾಗಿದ್ದು, ಸರಬರಾಜುದಾರರೊಂದಿಗೆ ಸಮಾಲೋಚನೆ ನಡೆಸಿ ಪಾವತಿಗೆ ಕ್ರಮ ವಹಿಸಬಹುದೆಂದು ಕಾನೂನು ಅಭಿಪ್ರಾಯ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಸಮಕ್ಷಮದಲ್ಲಿ ಔಪಚಾರಿಕ ದರ ಸಮಾಲೋಚನೆ ನಡೆಸಿದ್ದು, ಸಂಸ್ಥೆಯವರು ದರಸಮಾಲೋಚನೆಯಲ್ಲಿ ರೂ.69,97,862/–ಗಳಿಗೆ ಬದಲಾಗಿ ರೂ.48.00ಲಕ್ಷಗಳು+ಶೇ.18ರಷ್ಟು ಜಿ.ಎಸ್.ಟಿ. ಸೇರಿದಂತೆ ಒಟ್ಟು ರೂ.56,64,000/–ಗಳನ್ನು ಪಾವತಿಸುವಂತೆ ಕೇಳಿದ್ದು, ಈ ಬಗ್ಗೆ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು.

ಸದಸ್ಯರಾದ ಪ್ರೊ.ಚಂದ್ರಶೇಖರ್‌ರವರು ಮಾತನಾಡುತ್ತಾ, ಸದರಿ ಸಾಫ್ಟ್‌ವೇರ್ ನಂತರದ ವರ್ಷಗಳಲ್ಲಿ ಸಮರ್ಪಕವಾಗಿ ಕೆಲಸ ಮಾಡಿಲ್ಲ. ಅವಕಾಶವಿದ್ದಲ್ಲಿ ಅವರ ಕರಾರು ಒಪ್ಪಂದವನ್ನು ರದ್ದುಪಡಿಸಬಹುದು ಎಂದರು. ಕುಲಪತಿಯವರು ಮಾಹಿತಿ ನೀಡುತ್ತಾ, ಕೋವಿಡ್–2019ರ ಸಮಯದಲ್ಲಿ 2020–21ನೇ ಸಾಲಿನಲ್ಲಿ ಸದರಿ ಸಾಫ್ಟ್‌ವೇರ್‌ನ್ನು ಪ್ರವೇಶ ಪ್ರಕ್ರಿಯೆಗಳಿಗೆ ಬಳಸಿಕೊಳ್ಳಲಾಗಿತ್ತು. ನಂತರ ವಿಭಾಗಾಧ್ಯಕ್ಷರು ಹಾಗೂ ಸಿಂಡಿಕೇಟ್ ನಿರ್ಣಯದ ಮೇರೆಗೆ ಸಾಫ್ಟ್‌ವೇರನ್ನು 2ನೇ ವರ್ಷಕ್ಕೆ ಬಳಸಿಕೊಂಡಿಲ್ಲ. ಪ್ರಸ್ತುತ, ಒಂದು ವರ್ಷ ಮಾತ್ರ ಬಳಸಿಕೊಂಡಿರುವುದರಿಂದ ಕರಾರು ಒಪ್ಪಂದದ ಪ್ರಕಾರ ಹಾಗೂ ಕಾನೂನು ಸಲಹೆಗಾರರ ಅಭಿಪ್ರಾಯದ ಮೇರೆಗೆ 1ನೇ ವರ್ಷದ ಬಾಕಿ ಮೊಬಲಗನ್ನು ಪಾವತಿಸಬೇಕಾಗಿದೆ ಎಂದರು. ಸದಸ್ಯರಾದ ಡಾ.ಎ.ಟಿ.ಪದ್ಮೇಗೌಡರವರು ಮಾತನಾಡುತ್ತಾ, ಸಾಫ್ಟ್‌ವೇರ್‌ಗೆ ತೆರಿಗೆ ಸೇರಿ ರೂ.56,64,000/–ಗಳನ್ನು ಪಾವತಿಸುವುದು ಸರಿಯಲ್ಲ. ಇದು ವಿಶ್ವವಿದ್ಯಾಲಯಕ್ಕೆ ತುಂಬಾ ಆರ್ಥಿಕ ಹೊರೆಯಾಗುತ್ತದೆ. ಆದುದರಿಂದ, ಇದರಲ್ಲಿ ಇನ್ನಷ್ಟು ಹಣವನ್ನು ಕಡಿತಗೊಳಿಸಬಹುದು ಎಂದರು. ಸದಸ್ಯರಾದ ಶ್ರೀ ಮಂಜುನಾಥರವರು ಮಾತನಾಡಿ, ಸಾಫ್ಟ್‌ವೇರ್ ತಜ್ಞರು, ಸಿಂಡಿಕೇಟ್ ಸದಸ್ಯರು ಸೇರಿದಂತೆ ಒಂದು ಸಮಿತಿಯನ್ನು ರಚಿಸಿ, 2ನೇ ವರ್ಷಕ್ಕೆ ಬಳಸಿಕೊಂಡಿಲ್ಲ ಎಂಬುದರ ಬಗ್ಗೆ ಅಧಿಕೃತವಾಗಿ ಪರಿಶೀಲಿಸಿ ನಿರ್ಣಯಿಸಿ, 1ನೇ ವರ್ಷದ ಸೇವೆ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಸಂಸ್ಥೆಯವರೊಂದಿಗೆ ಇನ್ನೊಮ್ಮೆ Negotiation ಮಾಡಿದ ನಂತರ ಬಾಕಿ ಹಣ ಪಾವತಿಗೆ ಕ್ರಮವಹಿಸಬಹುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸಾಫ್ಟ್‌ವೇರ್ ತಜ್ಞರು, ಸಿಂಡಿಕೇಟ್ ಸದಸ್ಯರು ಸೇರಿದಂತೆ ಒಂದು ಪರಿಣಿತರ ಸಮಿತಿಯನ್ನು ರಚಿಸಿ, 2ನೇ ವರ್ಷಕ್ಕೆ ಬಳಸಿಕೊಂಡಿಲ್ಲ ಎಂಬುದರ ಬಗ್ಗೆ ಅಧಿಕೃತವಾಗಿ ಪರಿಶೀಲಿಸಿ ನಿರ್ಣಯಿಸಿ, 1ನೇ ವರ್ಷದ ಸೇವೆ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಸಂಸ್ಥೆಯುವರೊಂದಿಗೆ ಇನ್ನೊಮ್ಮೆ ದರಸಂಧಾನ (Negotiation) ಮಾಡಿದ ನಂತರ ಬಾಕಿ ಪಾವತಿಗೆ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಸದಸ್ಯರು ಮಂಡಿಸಿರುವ ಪ್ರಸ್ತಾವನೆ:

2023-ಸಿಂ-3.14 (ಎ): ಸಹ್ಯಾದ್ರಿ ಕಾಲೇಜಿನ ಹೊರಗುತ್ತಿಗೆ ಸಿಬ್ಬಂದಿಗೆ ಹೆಚ್ಚುವರಿ ವೇತನ ನೀಡುವ ಬಗ್ಗೆ.

ಸದಸ್ಯರಾದ ಡಾ.ಎ.ಟಿ. ಪದ್ಮೇಗೌಡರವರು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯಲ್ಲಿ ಕೆಲವು ಹೊರಗುತ್ತಿಗೆ ಸಿಬ್ಬಂದಿಗಳಿಗೆ ಹೆಚ್ಚುವರಿ ವೇತನವನ್ನು ಮಂಜೂರು ಮಾಡಿದ್ದು, ಅದೇ ರೀತಿ ಸಹ್ಯಾದ್ರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕೂಡ ಕನಿಷ್ಠ ಹೆಚ್ಚುವರಿ ವೇತನ ನೀಡುವಂತೆ ಕೋರಿದರು. ಕುಲಸಚಿವರು ಮಾಹಿತಿ ನೀಡಿ, ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ಗುರುತಿಸಿರುವಂತೆ ಅಪಾಯಕಾರಿ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ವಿಭಾಗದ ಹೊರಗುತ್ತಿಗೆ ನೌಕರರು ಅತ್ಯಾವಶ್ಯಕ ಸೇವೆಯಡಿಯಲ್ಲಿ ಬರುವುದರಿಂದ ಹಾಗೂ ಅವರ ಕೆಲಸಕ್ಕೆ ನಿಗದಿತ ಸಮಯ ಇರುವುದಿಲ್ಲವಾದ್ದರಿಂದ ಅವರಿಗೆ ಹೆಚ್ಚಿನ ವೇತನ ನೀಡಲು ನಿರ್ಣಯಿಸಿದೆ. ಆದರೆ, ಕಾಲೇಜಿನಲ್ಲಿ ಅಂತಹ ನೌಕರರು ಇಲ್ಲ ಎಂದರು. ಪದ್ಮೇಗೌಡರವರು ಮಾತನಾಡಿ, ಕಾಲೇಜಿನಲ್ಲಿ ಕೂಡ ಅಂತಹ ಕೆಲವು ನೌಕರರಿದ್ದು, ಅವರಿಗೆ ಸರಿಸಮವಲ್ಲದಿದ್ದರೂ ಕನಿಷ್ಠ ಮಾಸಿಕ ರೂ.2,000/-ಗಳಷ್ಟಾದರೂ ಹೆಚ್ಚುವರಿ ವೇತನ ನೀಡಬೇಕೆಂದರು. ಸದಸ್ಯರಾದ ಡಾ.ಎಂ.ಸ್ವಾಮಿರವರು ಮಾತನಾಡಿ, ಕರ್ತವ್ಯದ ಅವಧಿ ಹಾಗೂ ಕೆಲಸದ ರೀತಿಯನ್ನು ನೋಡಿಕೊಂಡು ನಿರ್ಧರಿಸಬೇಕಾಗುತ್ತದೆ ಎಂದರು. ಚರ್ಚೆಯ ನಂತರ ಈ ಕುರಿತಾಗಿ ಸಹ್ಯಾದ್ರಿ ಕಾಲೇಜಿನಿಂದ ಮಾಹಿತಿ ಪಡೆದುಕೊಂಡು ಪರಿಶೀಲಿಸಿ ನಿರ್ಣಯಿಸಲು ಸಭೆಯು ಒಪ್ಪಿತು.

2023-ಸಿಂ-3.14: **ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

2023-ಸಿಂ-3.14(ಎ): ಎಸ್.ಆರ್.ಎಸ್. ಮಹಿಳಾ ಪ್ರಥಮ ದರ್ಜೆ ಕಾಲೇಜು ಕಲಿಕಾರ್ಥಿ ಸೇವಾ ಕೇಂದ್ರದ ಕುರಿತು.

ಕುಲಸಚಿವರು ಮಾತನಾಡುತ್ತಾ, ತುಮಕೂರಿನ ಎಸ್.ಆರ್.ಎಸ್. ಪ್ರಥಮ ದರ್ಜೆ ಕಾಲೇಜು ತುಮಕೂರು ವಿಶ್ವವಿದ್ಯಾಲಯದ ಸಂಯೋಜನೆ ಪಡೆಯದಿರುವ ಹಿನ್ನೆಲೆಯಲ್ಲಿ, ಸದರಿ ಕಾಲೇಜಿನಲ್ಲಿದ್ದ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಕಲಿಕಾರ್ಥಿ ಸೇವಾ ಕೇಂದ್ರವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ರದ್ದುಪಡಿಸಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ದಿನಾಂಕ: 17-03-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿ ಸ್ಥಿರೀಕರಿಸಲಾಗಿತ್ತು. ಆದರೆ, ವಿಶ್ವವಿದ್ಯಾಲಯಕ್ಕೆ ಬಂದಿರುವ ಸರ್ಕಾರದ ಪತ್ರ ಸಂಖ್ಯೆ: ಇಡಿ 04 ಯುಎಸ್‌ವಿ 2003, ದಿನಾಂಕ: 21-03-2023ರಲ್ಲಿ ಎಸ್.ಆರ್.ಎಸ್. ಮಹಿಳಾ ಪ್ರಥಮ ದರ್ಜೆ ಕಾಲೇಜು, ತುಮಕೂರು ಇವರು 2019-20ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದುಕೊಂಡು UUCMS ತಂತ್ರಾಂಶದಲ್ಲಿ ನೊಂದಣಿ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿರುವುದರಿಂದ ಕುವೆಂಪು ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಕಲಿಕಾರ್ಥಿ ಸೇವಾ ಕೇಂದ್ರದ ಮಾನ್ಯತೆಯನ್ನು ನಿಯಮಗಳ ಪ್ರಕಾರ ಮುಂದುವರಿಸಲು ಕ್ರಮವಹಿಸುವಂತೆ ತಿಳಿಸಿರುತ್ತಾರೆ ಎಂದರು.

ಚರ್ಚೆಯ ನಂತರ ತುಮಕೂರಿನ ಎಸ್.ಆರ್.ಎಸ್. ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ವಿಶ್ವವಿದ್ಯಾಲಯದ ಸಮಿತಿಯು ಇನ್ನೊಮ್ಮೆ ಭೇಟಿ ನೀಡಿ ಪರಿಶೀಲಿಸಿ ಕಲಿಕಾರ್ಥಿ ಸೇವಾ ಕೇಂದ್ರವನ್ನು ಮುಂದುವರಿಸುವ ಕುರಿತಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಲಾಯಿತು.

2023-ಸಿಂ-3.15: **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

2023-ಸಿಂ-3.15(ಎ): ಸದಸ್ಯರಾದ ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಈಗಾಗಲೇ ದ್ವಿತೀಯ ಪಿ.ಯು.ಸಿ. ಫಲಿತಾಂಶ ಪ್ರಕಟವಾಗಿ ಬಹಳ ದಿನಗಳಾಗಿವೆ. ವಿಶ್ವವಿದ್ಯಾಲಯವು ಆದಷ್ಟು ಬೇಗನೆ ಪ್ರವೇಶದ ಅಧಿಸೂಚನೆ ಹೊರಡಿಸಿದಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲವಾಗುತ್ತದೆ ಎಂದರು. ಸದಸ್ಯರಾದ ಡಾ.ಎಂ.ಸ್ವಾಮಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ರವರು ಮಾತನಾಡಿ, ಪ್ರವೇಶದ ಅಧಿಸೂಚನೆ ವಿಳಂಬವಾದಲ್ಲಿ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ತೆರಳುತ್ತಾರೆ. ಇದರಿಂದಾಗಿ ಪದವಿ ಕಾಲೇಜುಗಳ ಪ್ರವೇಶ ಕಡಿಮೆಯಾಗುತ್ತದೆ ಎಂದರು. ಸದಸ್ಯರಾದ ಡಾ.ಎ.ಟಿ. ಪದ್ಮೇಗೌಡ ಹಾಗೂ ಶ್ರೀ ವಿನಯ್‌ಕುಮಾರ್ ಶೆಟ್ಟಿರವರು ಕೂಡ ಧ್ವನಿಗೂಡಿಸಿ ಪ್ರವೇಶ ವಿಳಂಬದಿಂದಾಗುವ ಸಮಸ್ಯೆಗಳನ್ನು ವಿವರಿಸಿದರು. ಕುಲಸಚಿವರು ಮಾತನಾಡಿ, ಪ್ರವೇಶದ ಅಧಿಸೂಚನೆಯನ್ನು ಸಿದ್ಧಪಡಿಸಲಾಗಿದೆ. ಆದರೆ, UUCMS ತಂತ್ರಾಂಶದಲ್ಲಿ ಕೋರ್ಸ್‌ಗಳು, ಪ್ರವೇಶ ಶುಲ್ಕ ಇತ್ಯಾದಿಗಳು ಅಪ್‌ಡೇಟ್ ಆಗದಿರುವುದರಿಂದ ವಿಳಂಬವಾಗುತ್ತಿದೆ, ಆದಾಗ್ಯೂ, ಆದಷ್ಟು ಬೇಗನೆ ಅಧಿಸೂಚನೆ ಹೊರಡಿಸಲಾಗುವುದು ಎಂದರು.

2023–ಸಿಂ–3.15: (ಬಿ) ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ನೌಕರರಾದ ಶ್ರೀ ಎಂ.ಎಂ.ಸ್ವಾಮಿರವರು ಕುವೆಂಪು ವಿಶ್ವವಿದ್ಯಾಯ ವಿಲೀನೀಕರಣಗೊಂಡ ಅಧ್ಯಾಪಕೇತರ ನೌಕರರ ವೇದಿಕೆ (ನೋಂ.) ಎಂಬ ಲೆಟರ್ ಹೆಡ್‌ನಲ್ಲಿ ಸಂಘದ ಉಪಾಧ್ಯಕ್ಷರ ಪದನಾಮದಲ್ಲಿ ಕುಲಸಚಿವರಿಗೆ ಪತ್ರ ಬರೆದು, ಈ ಹಿಂದೆ ಸಿಂಡಿಕೇಟ್ ಸಭೆಗಳಲ್ಲಿ ನಿರ್ಣಯಿಸಿರುವಂತೆ ವಿಲೀನೀಕರಣಗೊಂಡ ನೌಕರರಿಗೆ ಸೇವಾ ಸೌಲಭ್ಯ ವಿಸ್ತರಣೆ, ಜೇಷ್ಠತೆ ಇತ್ಯಾದಿಗಳನ್ನು ನೀಡುವಂತೆ ಕೋರಿರುತ್ತಾರೆ. ಆದರೆ, ಆಡಳಿತಾಂಗವು ಪಡೆದಿರುವ ಲಿಖಿತ ಮಾಹಿತಿಯ ಪ್ರಕಾರ ಕುವೆಂಪು ವಿಶ್ವವಿದ್ಯಾಯ ವಿಲೀನೀಕರಣಗೊಂಡ ಅಧ್ಯಾಪಕೇತರ ನೌಕರರ ವೇದಿಕೆ (ನೋಂ.) ಎಂಬುದು ಪ್ರಸ್ತುತ ಅಸ್ಥಿತ್ವದಲ್ಲಿ ಇಲ್ಲ. 2011ನೇ ಇಸವಿಯ ನಂತರ ಸಂಘದ ನೋಂದಣಿಯನ್ನು ನವೀಕರಿಸಿಲ್ಲ. ಸಂಘವನ್ನು ವಿಸರ್ಜಿಸುವಂತೆ ಸಹಕಾರ ಸಂಘದ ಉಪ ನೊಂದಣಾಧಿಕಾರಿಗಳಿಗೆ ಸಂಘದ ಕಾರ್ಯದರ್ಶಿಯವರು ಪತ್ರ ಬರೆದಿರುತ್ತಾರೆ ಎಂದರು. ಸದಸ್ಯರಾದ ಶ್ರೀ ವಿನಯ್‌ಕುಮಾರ್ ಶೆಟ್ಟಿರವರು ಮಾತನಾಡಿ ಸರ್ಕಾರದ ಇಲಾಖೆಗಳಲ್ಲಿ ಕೂಡ ಹಂಗಾಮಿ ಸೇವೆಯನ್ನು ಸೇವಾ ಜೇಷ್ಠತೆ, ಆರ್ಥಿಕ ಸೌಲಭ್ಯಗಳಿಗೆ ಪರಿಗಣಿಸುತ್ತಿಲ್ಲ. ಕೆ.ಸಿ.ಎಸ್.ಆರ್. ಪ್ರಕಾರ ಕೇವಲ ನಿವೃತ್ತಿ ಸೌಲಭ್ಯಗಳಿಗೆ ಮಾತ್ರ ಒಟ್ಟು ಹಂಗಾಮಿ ಸೇವೆಯ ನಾಲ್ಕನೇ ಒಂದು ಭಾಗ ಅಥವಾ ಗರಿಷ್ಠ ಮೂರು ವರ್ಷಗಳು, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮಾತ್ರ ಪರಿಗಣಿಸಲಾಗುತ್ತದೆ ಎಂದರು. ಸದಸ್ಯರಾದ ಡಾ.ಎಂ.ಸ್ವಾಮಿರವರು ಮಾತನಾಡಿ, ವಿಲೀನೀಕರಣಗೊಂಡ ಅಧ್ಯಾಪಕರ ಪ್ರಕರಣಗಳಲ್ಲಿ ಕೂಡ ಹಂಗಾಮಿ ಸೇವೆ ಪರಿಗಣಿಸಿಲ್ಲ. ಕೇವಲ ಖಾಯಂಗೊಂಡ ದಿನಾಂಕದಿಂದ ಮಾತ್ರ ಪರಿಗಣಿಸಲಾಗಿದೆ ಎಂದರು. ಶ್ರೀ ಎನ್.ಆರ್.ಮಂಜುನಾಥ ಹಾಗೂ ಡಾ.ಸಂಧ್ಯಾಕಾವೇರಿ ಇವರುಗಳು ಮಾತನಾಡಿ, ಹಿಂದೆ ಆಗಿರುವ ನಿರ್ಣಯಗಳ ಪ್ರಕಾರ ಈಗ ಕ್ರಮಕೈಗೊಳ್ಳಲು ಸಾಧ್ಯವಿಲ್ಲ. ಈಗಿನ ಸರ್ಕಾರದ ನಿಯಮಗಳ ಪ್ರಕಾರ ಪರಿಶೀಲಿಸಲು ಒಂದು ಸಮಿತಿ ರಚಿಸಿ ವರದಿ ಪಡೆದುಕೊಳ್ಳಬಹುದು ಎಂದರು.

ಚರ್ಚೆಯ ನಂತರ ವಿಲೀನೀಕರಣಗೊಂಡ ನೌಕರರಿಗೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ನೀಡುವ ಕುರಿತಾಗಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಸೇವಾ ಕಾನೂನುಗಳನ್ನು ಪರಿಶೀಲಿಸಿ ವರದಿ ನೀಡಲು ಕಾನೂನು ಮತ್ತು ಸೇವಾ ತಜ್ಞರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ವರದಿ ಪಡೆಯುವಂತೆ ನಿರ್ಣಯಿಸಲಾಯಿತು.

2023–ಸಿಂ–3.15(ಸಿ): ಮಾನ್ಯ ಕುಲಪತಿಯವರು ಮಾತನಾಡುತ್ತಾ, ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಎಲ್.ಇ.ಡಿ. ಪ್ರದರ್ಶನ ಪರದೆಗಳನ್ನು ಅಳವಡಿಸಲಾಗಿದ್ದು, ಪ್ರಸ್ತುತ ನ್ಯಾಕ್ ಮರು ಮಾನ್ಯತೆ ಇರುವುದರಿಂದ ವಿಶ್ವವಿದ್ಯಾಲಯದ ಕೇಂದ್ರ ಕಛೇರಿ, ಸಹ್ಯಾದ್ರಿ ಕಾಲೇಜು ಆವರಣ, ಸ್ನಾತಕೋತ್ತರ ಕೇಂದ್ರ ಕಡೂರು ಮತ್ತು ಚಿಕ್ಕಮಗಳೂರುಗಳಲ್ಲಿ ಅಳವಡಿಸಿದರೆ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ ಎಂದರು. ಸದಸ್ಯರಾದ ಡಾ.ಎ.ಟಿ. ಪದ್ಮೇಗೌಡರವರು ಮಾತನಾಡಿ ವಿಶ್ವವಿದ್ಯಾಲಯವು ನ್ಯಾಕ್ ಮರುಮಾನ್ಯತೆಗೆ ಹೋಗುತ್ತಿರುವುದರಿಂದ ಇಂತಹವುಗಳಿಗೆ ಹೆಚ್ಚಿನ ಹಣ ವ್ಯಯಿಸುವುದು ಉತ್ತಮವಲ್ಲ ಅಲ್ಲದೇ, ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗವಾಗುವುದಿಲ್ಲ ಎಂದರು. ಶ್ರೀ ಎನ್.ಆರ್., ಮಂಜುನಾಥರವರು ಮಾತನಾಡಿ, ಇದು ಬಹಳ ದುಬಾರಿಯಾಗುತ್ತದೆ. ಆದುದರಿಂದ ಸಧ್ಯಕ್ಕೆ ಕೇಂದ್ರ ಕಛೇರಿಯಲ್ಲಿ ಮಾತ್ರ ಅಳವಡಿಸಿದರೆ ಸಾಕು. ಸ್ಪರ್ಧಾತ್ಮಕ ದರದಲ್ಲಿ ಖರೀದಿಸುವ ದೃಷ್ಟಿಯಿಂದ ಬೇರೆ ಕಂಪನಿಗಳಿಂದ ಕೂಡ ದರಪಟ್ಟಿ ಪಡೆದು ಪರಿಶೀಲಿಸಬಹುದಾಗಿದ್ದು, ಇದಕ್ಕಾಗಿ ಇ–ಟೆಂಡರ್ ಕರೆಯುವುದು ಸೂಕ್ತ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಚರ್ಚೆಯ ನಂತರ, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಉಪಯೋಗದ ದೃಷ್ಟಿಯಿಂದ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಗೆ ಹಾಗೂ ಸಹ್ಯಾದ್ರಿ ಕಾಲೇಜಿಗೆ ಮಾತ್ರ ಒಂದೊಂದು ಎಲ್.ಇ.ಡಿ. ಪ್ರದರ್ಶನ ಪರದೆಯನ್ನು ಇ-ಟೆಂಡರ್ ಮೂಲಕ ಖರೀದಿಸಲು ಸಭೆಯು ನಿರ್ಣಯಿಸಿತು.

2023–ಸಿಂ–3.15 (ಡ): ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಶ್ರೀ ಚಂದ್ರಕಾಂತ, ಎಂ., ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ ಇವರ ಸೇವಾ ನ್ಯೂನತೆಗಳಿಗೆ ಸಂಬಂಧಪಟ್ಟಂತೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೆಲ ಸಂಘಟನೆಗಳಿಂದ, ಸರ್ಕಾರದಿಂದ ಮತ್ತು ಲೋಕಾಯುಕ್ತ ಕಛೇರಿಯಿಂದ ಪತ್ರಗಳು ಬಂದಿದ್ದು, ವಿಶ್ವವಿದ್ಯಾಲಯ ತೆಗೆದುಕೊಂಡಿರುವ ಕ್ರಮದ ಕುರಿತಾಗಿ ಸರ್ಕಾರ ಹಾಗೂ ಲೋಕಾಯುಕ್ತ ಕಛೇರಿಗೆ ವರದಿ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಅಗತ್ಯ ಮಾಹಿತಿ ಪಡೆಯುವ ಸಲುವಾಗಿ ಶ್ರೀ ಚಂದ್ರಕಾಂತ ಎಂ., ಹಾಗೂ ಪ್ರಾಂಶುಪಾಲರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ ಇವರುಗಳಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದ್ದು, ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಚರ್ಚೆಯ ನಂತರ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು